# ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 168 ಮೀಇಇ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 06-02-2018

ಹನಿಕ 1
6/2/18

## ತಿದ್ದುಪಡಿ

ಆದೇಶ ಸಂಖ್ಯೆ: ಪಸಂಮೀ/125/ಮೀಇಇ/2013, ದಿನಾಂಕ: 21-02-2014ರ ಕೆಲವೊಂದು ಕಂಡಿಕೆಗಳಿಗೆ ಕೆಳಕಂಡಂತೆ ಅವುಗಳ ಮುಂದೆ ನಮೂದಿಸಿರುವಂತೆ ತಿದ್ದಿ / ಸೇರ್ಪಡೆ ಮಾಡಿ ಓದಿಕೊಳ್ಳತಕ್ಕದ್ದು.

| ಕ್ರ. ಸಂ. | ಹಾಲಿ ಜಾರಿಯಲ್ಲಿರುವುದು | ಕೆಳಗಿನಂತೆ ತಿದ್ದುಪಡಿ / ಸೇರ್ಪಡೆ ಮಾಡಲಾಗಿದೆ |
|---|---|---|
| 1 | **ಕಂಡಿಕೆ 4 ವಿಲೇವಾರಿ ಗುತ್ತಿಗೆ**<br><br>1) ಅ) ಜಲಸಂಪನ್ಮೂಲಗಳನ್ನು ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಗರಿಷ್ಟ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದು. | 1) ಅ) ಇಲಾಖಾ ವ್ಯಾಪ್ತಿಗೆ ಬರುವ ಎಲ್ಲಾ ಜಲ ಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಈ ಕೆಳಗೆ ಕಾಣಿಸಿದಂತೆ ಸಂಘ/ಸಂಸ್ಥೆಗಳಿಗೆ ಮಾತ್ರ ಸೀಮಿತಗೊಳಿಸಿ ಆದ್ಯತೆ ಮೇರೆಗೆ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡತಕ್ಕದ್ದು.<br>1. ಮೀನುಗಾರರ ಸಮುದಾಯಕ್ಕೆ ಸೇರಿದ ಕನಿಷ್ಟ ಶೇ.90 ರಷ್ಟು ಮೀನುಗಾರರನ್ನು ಸದಸ್ಯರಾಗಿ ಹೊಂದಿರುವ ಮೀನುಗಾರರ ಸಹಕಾರ ಸಂಘಗಳಿಗೆ (ಮೀನುಗಾರರ ಸಮುದಾಯಕ್ಕೆ ಸೇರಿದ ಜಾತಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ).<br>2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೀನುಗಾರರ ಸಹಕಾರ ಸಂಘಗಳು.<br>3. ಇತರೇ ಮೀನುಗಾರರ ಸಹಕಾರ ಸಂಘಗಳು.<br>4. ಮೀನುಗಾರರ ಸಹಕಾರ ಸಂಘಗಳ ಸಹಕಾರಿ ಒಕ್ಕೂಟಗಳು / ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ ನಿ., ಮೈಸೂರು. |
| | 1) ಆ) ಪ್ರತಿ ಅರ್ಹ ಮೀನುಗಾರರ ಸಹಕಾರ ಸಂಘಕ್ಕೆ ಆ ಸಂಘದ ಬೈಲಾ ಪ್ರಕಾರ ಅದರ ಕಾರ್ಯವ್ಯಾಪ್ತಿಯಲ್ಲಿ ಗರಿಷ್ಟ 300 ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಮೀರದಂತೆ ಗರಿಷ್ಟ 3 ಕೆರೆ ಅಥವಾ ಆದೇಶ ಅನುಬಂಧ-2 ರಲ್ಲಿ ಪಟ್ಟಿ ಮಾಡಿರುವ 1 ಜಲಾಶಯದ ಅಥವಾ ಗರಿಷ್ಟ ಮೂರು ನದಿ ಭಾಗ ಮಾತ್ರ ಗುತ್ತಿಗೆಗೆ ನೀಡುವುದು (300 ಹೆಕ್ಟೇರ್) ಜಲವಿಸ್ತೀರ್ಣ ಮೀರಿದ ಜಲ ಸಂಪನ್ಮೂಲಗಳಿದ್ದ ಸಂದರ್ಭದಲ್ಲಿ ಕೇವಲ ಒಂದು ಜಲಾಶಯದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆದಾರರು ಪಡೆಯಲು ಅರ್ಹತೆ ಹೊಂದಿರುತ್ತಾರೆ | 1) ಆ) ಪ್ರತಿ ಅರ್ಹ ಮೀನುಗಾರರ ಸಹಕಾರ ಸಂಘಕ್ಕೆ ಆ ಸಂಘದ ಬೈಲಾ ಪ್ರಕಾರ ಅದರ ಕಾರ್ಯವ್ಯಾಪ್ತಿಯಲ್ಲಿ ಗರಿಷ್ಟ 300 ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಮೀರದಂತೆ ಗರಿಷ್ಟ 3 ಕೆರೆ ಅಥವಾ ಆದೇಶ ಅನುಬಂಧ-2 ರಲ್ಲಿ ಪಟ್ಟಿ ಮಾಡಿರುವ 1 ಜಲಾಶಯ ಅಥವಾ ಗರಿಷ್ಟ ಮೂರು ನದಿ ಭಾಗ ಮಾತ್ರ ಗುತ್ತಿಗೆಗೆ ನೀಡುವುದು (300 ಹೆಕ್ಟೇರ್) ಜಲವಿಸ್ತೀರ್ಣ ಮೀರಿದ ಜಲಸಂಪನ್ಮೂಲಗಳಿದ್ದ ಸಂದರ್ಭದಲ್ಲಿ ಕೇವಲ ಒಂದು ಜಲಾಶಯದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆದಾರರು ಪಡೆಯಲು ಅರ್ಹತೆ ಹೊಂದಿರುತ್ತಾರೆ.<br><br>ಆದ್ಯಾಗ್ಯೂ ಕಲಬುರಗಿ ಹಾಗೂ ಬೆಳಗಾವಿ ಕಂದಾಯ ವಿಭಾಗದ ವ್ಯಾಪ್ತಿಯ ಜಿಲ್ಲೆಗಳಿಗೆ ಮಾತ್ರ ಅನ್ವಯವಾಗುವಂತೆ ಪ್ರತಿ ಅರ್ಹ ಮೀನುಗಾರರ ಸಹಕಾರ ಸಂಘ/ಸಂಸ್ಥೆಗೆ ಆ ಸಂಘದ ಉಪನಿಯಮದ ಪ್ರಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಗರಿಷ್ಟ 400 ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಮೀರದಂತೆ ಗರಿಷ್ಟ 4 ಕೆರೆ ಅಥವಾ ಆದೇಶದ ಅನುಬಂಧ (2)ರಲ್ಲಿ ಪಟ್ಟಿ ಮಾಡಿರುವ ಒಂದು ಜಲಾಶಯ ಅಥವಾ ಗರಿಷ್ಟ 4 ನದಿ ಭಾಗಗಳನ್ನು ಗುತ್ತಿಗೆ ನೀಡುವುದು. |

| | | |
|---|---|---|
| 2 | **ಅನುಬಂಧ-5 ಷರತ್ತು ಸಂ.04**<br><br>ಟೆಂಡರು ಹಾಗೂ ಹರಾಜಿನಲ್ಲಿ ಭಾಗವಹಿಸುವವರು ಮೀನುಗಾರಿಕೆ ಇಲಾಖೆ ನಿಗದಿಪಡಿಸಿದ ಭದ್ರತಾ ಠೇವಣಿಯನ್ನು ನಗದು ಹುಂಡಿ (ಡಿಡಿ) ಮೂಲಕ ಪಾವತಿಸಿ ಟೆಂಡರು/ಹರಾಜಿನಲ್ಲಿ ಭಾಗವಹಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸುವವರು ಭದ್ರತಾ ಠೇವಣಿ ಮೊತ್ತವನ್ನು ಮತ್ತೆ ಪಾವತಿಸಿದೇ ಹರಾಜಿನಲ್ಲಿ ಭಾಗವಹಿಸಬಹುದು. ಆದರೆ ಟೆಂಡರ್‌ನಲ್ಲಿ ಭಾಗವಹಿಸದೇ ಬರೀ ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಕ್ರಿಯೆ ಪ್ರಾರಂಭದ ಮುನ್ನ ಭದ್ರತಾ ಠೇವಣಿ ಮೊತ್ತವನ್ನು ನಗದು / ಹುಂಡಿಯ ಮೂಲಕ ಪಾವತಿಸಿ ಭಾಗವಹಿಸಬಹುದು. ಈ ಭದ್ರತಾ ಠೇವಣಿ ಮೊತ್ತ ಆಯಾ ಜಲಸಂಪನ್ಮೂಲದ ಉಪಯುಕ್ತತಾ ಜಲವಿಸ್ತೀರ್ಣದ ಶೇ.15 ರಷ್ಟು ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್‌ಗೆ ರೂ.500.00 ನಿಗದಿಪಡಿಸತಕ್ಕದ್ದು. ಯಶಸ್ವಿ ಬಿಡ್‌ದಾರರು ಭದ್ರತಾ ಠೇವಣಿ ಮೊತ್ತವನ್ನು ಗುತ್ತಿಗೆ ಅವಧಿ ಮುಗಿದನಂತರ ಅವರಿಗೆ ರೀಫಂಡ್ ಮೂಲಕ ಮರುಪಾವತಿಸ ತಕ್ಕದ್ದು. ಒಂದು ವೇಳೆ ಅಖೈರಾದ ಬಿಡ್ಡುದಾರರು ಗುತ್ತಿಗೆ ಮೊತ್ತ ಪಾವತಿಸದಿದ್ದಲ್ಲಿ, ಅಥವಾ ಗುತ್ತಿಗೆ ಅವಧಿಯಲ್ಲಿ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅವರ ಭದ್ರತಾ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು, ಯಶಸ್ವಿಯಾಗದ ಟೆಂಡರುದಾರರು / ಬಿಡ್ಡುದಾರರ ಠೇವಣಿ ಮೊತ್ತದ ನಗದು ಹುಂಡಿಗಳನ್ನು ಅವರಿಗೆ ಅಂದೇ ಹಿಂದಿರುಗಿಸಿ ಸ್ವೀಕೃತಿ ಪಡೆದುಕೊಳ್ಳತಕ್ಕದ್ದು. | ಟೆಂಡರು ಹಾಗೂ ಹರಾಜಿನಲ್ಲಿ ಭಾಗವಹಿಸುವವರು ಮೀನುಗಾರಿಕೆ ಇಲಾಖೆ ನಿಗದಿಪಡಿಸಿದ ಭದ್ರತಾ ಠೇವಣಿಯನ್ನು ನಗದು ಹುಂಡಿ (ಡಿಡಿ) ಮೂಲಕ ಪಾವತಿಸಿ ಟೆಂಡರು / ಹರಾಜಿನಲ್ಲಿ ಭಾಗವಹಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸುವವರು ಭದ್ರತಾ ಠೇವಣಿ ಮೊತ್ತವನ್ನು ಮತ್ತೆ ಪಾವತಿಸಿದೇ ಹರಾಜಿನಲ್ಲಿ ಭಾಗವಹಿಸಬಹುದು. ಆದರೆ ಟೆಂಡರ್‌ನಲ್ಲಿ ಭಾಗವಹಿಸದೇ ಬರೀ ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಕ್ರಿಯೆ ಪ್ರಾರಂಭದ ಮುನ್ನ ಭದ್ರತಾ ಠೇವಣಿ ಮೊತ್ತವನ್ನು ನಗದು / ಹುಂಡಿಯ ಮೂಲಕ ಪಾವತಿಸಿ ಭಾಗವಹಿಸಬಹುದು. ಈ ಭದ್ರತಾ ಠೇವಣಿ ಮೊತ್ತ ಆಯಾ ಜಲಸಂಪನ್ಮೂಲದ ಉಪಯುಕ್ತತಾ ಜಲವಿಸ್ತೀರ್ಣದ ಶೇ.15 ರಷ್ಟು ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್‌ಗೆ ರೂ.500.00 ಅಥವಾ ಕನಿಷ್ಟ ರೂ.10000/- ಈ ಎರಡರಲ್ಲಿ ಯಾವುದೂ ಹೆಚ್ಚೋ ಅದನ್ನು ನಿಗದಿಪಡಿಸುವುದು. ಭದ್ರತಾ ಠೇವಣಿ ಮೊತ್ತವನ್ನು ನಗದಾಗಿ / ನಗದು ಹುಂಡಿ ಮೂಲಕ ಪಾವತಿಸಬಹುದು. ಭದ್ರತಾ ಠೇವಣಿಯನ್ನು ಕೊನೆಯ ವರ್ಷದ ಗುತ್ತಿಗೆಯನ್ನು ನವೀಕರಿಸುವಾಗ ಗುತ್ತಿಗೆ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.<br><br>ಒಂದು ವೇಳೆ ಅಖೈರಾದ ಬಿಡ್ಡುದಾರರು ಗುತ್ತಿಗೆ ಮೊತ್ತ ಪಾವತಿಸದಿದ್ದಲ್ಲಿ ಅಥವಾ ಗುತ್ತಿಗೆ ಅವಧಿ ಯಲ್ಲಿ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅವರ ಭದ್ರತಾ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು, ಯಶಸ್ವಿಯಾಗದ ಟೆಂಡರುದಾರರು / ಬಿಡ್ಡುದಾರರ ಠೇವಣಿ ಮೊತ್ತದ ನಗದು ಹುಂಡಿಗಳನ್ನು ಅವರಿಗೆ ಅಂದೇ ಹಿಂದಿರುಗಿಸಿ ಸ್ವೀಕೃತಿ ಪಡೆದುಕೊಳ್ಳತಕ್ಕದ್ದು. |
| 3 | **ಹೊಸದಾಗಿ ಸೇರ್ಪಡೆ** | ಕಂಡಿಕೆ-12 (ಅ) ನಂತರ :- (ಆ) ರಾಜ್ಯ ಸರ್ಕಾರದಿಂದ ಅತೀವೃಷ್ಟಿ ಅಥವಾ ಅನಾವೃಷ್ಟಿ ಎಂದು ಘೋಷಿಸಿದ ತಾಲ್ಲೂಕುಗಳಲ್ಲಿ ಗುತ್ತಿಗೆ / ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿಯಾದ ಕೆರೆಗಳ 5 ವರ್ಷಗಳ ಅವಧಿಯಲ್ಲಿ ಕನಿಷ್ಟ 2 ವರ್ಷ ಘೋಷಿಸಿದ ತಾಲ್ಲೂಕುಗಳಲ್ಲಿ ಆ ಕೆರೆಗಳ ಮೀನು ಪಾಶುವಾರು ಹಕ್ಕನ್ನು 1 ವರ್ಷ ಪಾವತಿ ಸಹಿತವಾಗಿ ಹಾಗೂ 2 ಕ್ಕಿಂತ ಹೆಚ್ಚು ವರ್ಷಗಳು ಅತೀವೃಷ್ಟಿ ಅಥವಾ ಅನಾವೃಷಿ ತಾಲ್ಲೂಕುಗಳೆಂದು ಘೋಷಿಸಿದಲ್ಲಿ 2 ವರ್ಷಗಳು ಪಾವತಿಸಹಿತವಾಗಿ ಮುಂದುವರಿಸುವುದು. |

<table>
<tr>
<td>4</td>
<td>ಅನುಬಂಧ-2 ಗುತ್ತಿಗೆ ಅಥವಾ ಟೆಂಡರ್ ಮೂಲಕ ವಿಲೇ ಮಾಡುವ ಪಟ್ಟಿ.</td>
<td>ಈ ಕೆಳಕಂಡ ಜಲಾಶಯಗಳನ್ನು ಸೇರಿಸಲಾಗಿದೆ.
<table>
<tr><th>ಜಿಲ್ಲೆ</th><th>ತಾಲ್ಲೂಕು</th><th></th><th>ಜಲಾಶಯದ ಹೆಸರು</th><th>ಗರಿಷ್ಟ ಜಲವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)</th></tr>
<tr><td>ಕೊಪ್ಪಳ</td><td>ಕೊಪ್ಪಳ</td><td>1</td><td>ಹಿರೇಹಳ್ಳಿ</td><td>1247.00</td></tr>
<tr><td>ಕಲಬುರ್ಗಿ</td><td>ಚಿತ್ತಾಪುರ</td><td>2</td><td>ಬೆಣ್ಣೆತೊರೆ</td><td>2201.00</td></tr>
</table>
</td>
</tr>
<tr>
<td>5</td>
<td>ಅನುಬಂಧ-3.<br>ಪರವಾನಿಗೆ ಮೂಲಕ ಮೀನು ಪಾಶುವಾರು ಹಕ್ಕನ್ನು ವಿಲೇ ಮಾಡುವ ಜಲಾಶಯಗಳ ಪಟ್ಟಿ</td>
<td>ಈ ಕೆಳಕಂಡ ಕೆರೆ / ಜಲಾಶಯಗಳನ್ನು ಸೇರಿಸಲಾಗಿದೆ.
<table>
<tr><th>ಜಿಲ್ಲೆ</th><th>ತಾಲ್ಲೂಕು</th><th>ಕ್ರ ಸಂ</th><th>ಜಲಾಶಯದ ಹೆಸರು</th><th>ಗರಿಷ್ಟ ಜಲ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th><th>ಷರಾ</th></tr>
<tr><td>ದಾವಣಗೆರೆ</td><td>ಚನ್ನಗಿರಿ</td><td>1</td><td>ಸವಳಂಗ</td><td>340</td><td></td></tr>
<tr><td>ಶಿವಮೊಗ್ಗ</td><td>ಶಿಕಾರಿಪುರ</td><td>2</td><td>ಮದಗಾ</td><td>350</td><td></td></tr>
<tr><td>ಚಿಕ್ಕಮಗಳೂರು</td><td>ತರೀಕೆರೆ</td><td>3</td><td>ಬುಕ್ಕಾಂಬುದಿ</td><td>164</td><td></td></tr>
<tr><td>ಬಳ್ಳಾರಿ</td><td>ಬಳ್ಳಾರಿ</td><td>4</td><td>ನಾರೀಹಳ್ಳ</td><td>280</td><td>ಪಟ್ಟಿಯಿಂದ ಕೈ ಬಿಡಲಾಗಿದೆ</td></tr>
</table>
</td>
</tr>
<tr>
<td>6</td>
<td>ಅನುಬಂಧ-6<br>ಷರತ್ತು ಸಂ:11<br>ನದಿ ಮತ್ತು ಜಲಾಶಯ ದಲ್ಲಿ ಎಡಬಲೆಗಳು, ಮಾರಿಬಲೆಗಳು ಮತ್ತು ಇನ್ನಿತರ ಪ್ರಕಾರದ ಎಳೆ ಬಲೆಗಳನ್ನು ಉಪಯೋಗಿಸಿ ಮೀನು ಹಿಡಿಯುವುದನ್ನು ನಿಷೇಧಿಸಲಾಗಿದೆ.</td>
<td>ಅನುಬಂಧ-6 ಷರತ್ತು ಸಂ:11 ನ್ನು ಸಡಿಲಗೊಳಿಸಿ ಈ ಕೆಳಗಿನಂತೆ ಮಾರ್ಪಡಿಸಿದೆ.<br><br>ರಾಜ್ಯದ ಜಲಾಶಯಗಳಲ್ಲಿ ಪ್ರತಿವರ್ಷ ಏಪ್ರಿಲ್-1 ರಿಂದ ಮೇ-15 ರವರೆಗೆ 45 ದಿನಗಳ ಅವಧಿಗೆ ಜಲಾಶಯದಲ್ಲಿ ಇರುವ ಸ್ಥಳೀಯ ಮೀನುಗಳನ್ನು ಹಿಡಿಯಲು ಅರ್ಧ ಇಂಚಿಗೆ (12.5 ಎಂಎಂ) ಮೇಲ್ಪಟ್ಟ ಕಣ್ಣಳತೆಯ ಎಳೆಬಲೆಗಳು, ಮಾರಿಬಲೆಗಳು ಮತ್ತು ಇನ್ನಿತರ ಪ್ರಕಾರದ ಎಳೆಬಲೆಗಳನ್ನು ಉಪಯೋಗಿಸಲು ಪರವಾನಿಗೆ ನೀಡಲು ಅನುಮತಿಸಿದೆ.<br><br>ಪರವಾನಿಗೆ ಶುಲ್ಕವನ್ನು ಪ್ರತಿಮೀಟರ್ ಉದ್ದದ ಬಲೆಗೆ ರೂ.75 ನಿಗದಿಪಡಿಸುವುದು ಗರಿಷ್ಟ 300 ಮೀಟರ್ ಉದ್ದದ ಬಲೆಗೆ ಅನುಮತಿ ನೀಡುವುದು.</td>
</tr>
</table>

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6/2/18

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

TCK 06.2.18.

**ಇವರಿಗೆ:**

1) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಈ ಆದೇಶವನ್ನು ಮುದ್ರಿಸಿ ಅದರ 1000 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಿದೆ.

**ಪ್ರತಿಗಳು:**

1) ಮಹಾಲೇಖಪಾಲರು (ಎ ಮತ್ತು ಇ)(ಎಯು-1)/(ಎಯು-2), ಕರ್ನಾಟಕ, ಬೆಂಗಳೂರು.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ನಗರಾಭಿವೃದ್ಧಿ ಇಲಾಖೆ / ಇಂಧನ ಇಲಾಖೆ / ಕಂದಾಯ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
5) ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
6) ಎಲ್ಲಾ ಜಿಲ್ಲಾಧಿಕಾರಿಗಳಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ).
7) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ).
8) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
10) ನಿರ್ದೇಶಕರು, ಪೌರಾಡಳಿತ ಇಲಾಖೆ, ಬೆಂಗಳೂರು.
11) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
12) ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
13) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು.
14) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ ನಿ., ನಂ.1226/1, ಭಾವಸಂಪದ, ನ್ಯೂ ಕಾಂತರಾಜ್ ಅರಸು ರಸ್ತೆ, ಬಲ್ಲಾಳವೃತ್ತದ ಬಳಿ, ಕೃಷ್ಣಮೂರ್ತಿಪುರಂ, ಮೈಸೂರು-570004.
15) ಕಾರ್ಯಕಾರಿ ನಿರ್ದೇಶಕರು, ಜಲಸಂವರ್ಧನೆ ಯೋಜನಾ ಸಂಘ, ನಂ.42, 5ನೇ ಅಡ್ಡ ರಸ್ತೆ, ಆರ್.ಎಂ.ವಿ. ಎಕ್ಸಟೆನ್ಷನ್, ಸದಾಶಿವನಗರ, ಬೆಂಗಳೂರು - 560080.
16) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೆರೆ ಅಭಿವೃದ್ಧಿ ಪ್ರಾಧಿಕಾರ, 2ನೇ ಮಹಡಿ, ಪರಿಸರ ಭವನ, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.
17) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ 50/2018)
18) ಮೀನುಗಾರಿಕೆ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
19) ಸಂಬಂಧಪಟ್ಟವರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
20) ಮಾನ್ಯ ಮೀನುಗಾರಿಕೆ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
21) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ/ ಹೆಚ್ಚುವರಿ ಪ್ರತಿಗಳು.

ತಿದ್ದುಪಡಿ ಸಂಖ್ಯೆ: ಪಸಂಮೀ/168/ಮೀಇಇ/2017, ಬೆಂಗಳೂರು ದಿನಾಂಕ: 06-02-2018

## ಮೀನುಗಾರರ ಸಮುದಾಯಕ್ಕೆ ಸೇರಿದ ಜಾತಿಗಳ ವಿವರ

### ಅನುಬಂಧ

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 1) | ಬೆಸ್ತ | 22) | ಕಬ್ಬೇರ / ಕಬ್ಬೇರ್ |
| 2) | ಅಂಬಿಗ / ಅಂಬಿ | 23) | ಕಬ್ಬೇಲಿಗ |
| 3) | ಭಾರ್ಕಿ / ಬಾರಿಕ | 24) | ಕಬಲಿ |
| 4) | ಬೆಸ್ತರ್ | 25) | ಕಹರ್ |
| 5) | ಭೋಯಿ | 26) | ಖಾರ್ವಿ / ಕೋಕಣ ಖಾರ್ವಿ |
| 6) | ರಾಜಭೋಯಿ | 27) | ಕೋಳಿ |
| 7) | ಬುಂಡೆ ಬೆಸ್ತರ್ | 28) | ಕೋಳಿ ಮಾಹದೇವ್ |
| 8) | ದಾಲ್ಜಿ | 29) | ಮಾಡ್ಡರ್ |
| 9) | ದಾವತ್ | 30) | ಮೀನುಗಾರ್ |
| 10) | ಗಬಿಟ್ | 31) | ಮೊಗವೀರ |
| 11) | ಗಲಾಡಕೊಂಕಣಿ | 32) | ಮೊಗೇರ್ |
| 12) | ಗಂಗೆಮಕ್ಕಳು | 33) | ಮುಕ್ವಾನ್ |
| 13) | ಗಂಗಾಕೂಲ | 34) | ಪರಿವಾರ |
| 14) | ಗಂಗಾಮತ | 35) | ಸಿವಿಯಾರ್ |
| 15) | ಗಂಗಾಮತಸ್ಥ | 36) | ಸುಣಗಾರ |
| 16) | ಗಂಗಾಪುತ್ರ | 37) | ತೊರೆಯಾ |
| 17) | ಗೌರಿಮಾತ | 38) | ಪಾಗಿ |
| 18) | ಬುಂಡೆಬೆಸ್ತ / ಗುಂಡೆಬೆಸ್ತ | | |
| 19) | ಹರಕಂತ್ರ | | |
| 20) | ಜಲಗಾರ | | |
| 21) | ಕಬೀರ / ಕಬೀರ್ | | |

6/2/18

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

TCK 06.2.18.